**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.Lok.14/2014**

| | | |
|---|---|---|
| ಸಾಕ್ಷಿದಾರರ ಹೆಸರು | : | ಪಿ. ನಾಗರಾಜ |
| ತಂದೆಯ ಹೆಸರು | : | ಪೂಜಾರಿ ಕೊಂಡಯ್ಯ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ್ತ ಜಿಲ್ಲಾ ವ್ಯವಸ್ಥಾಪಕರು |
| ವಾಸ ಸ್ಥಳ | : | ಬೆಂಗಳೂರು |

ಪಿ.ಡಬ್ಲ್ಯೂ 4

ಸಿ.ಡಬ್ಲ್ಯೂ 5

ದಿ: 25-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ (ಶ್ರೀ ಟಿ.ಆರ್.ಎಸ್.)**:

1. ನಾನು ಜಿಲ್ಲಾ ವ್ಯವಸ್ಥಾಪಕರಾಗಿ ಮೊದಲು ಚಿತ್ರದುರ್ಗದ ಹಿಂದುಳಿದ ವರ್ಗಗಳ ಅಭಿವೃದ್ದಿ ನಿಗಮದಲ್ಲಿ ಕೆಲಸ ಮಾಡುತ್ತಿದ್ದೆ. ದಾವಣಗೆರೆಯ ಡಿ. ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ದಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಅಂತ Additional charge ಅಂತ ಬೆಂಗಳೂರು ಕೇಂದ್ರ ಕಛೇರಿಯಿಂದ ಬಂದಿತ್ತು.

2. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತಳ ಪರಿಚಯ ಇದೆ. ಪೊಲೀಸರಿಗೆ ನನ್ನ ಹೇಳಿಕೇಯಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಹಿಂದುಳಿದ ವರ್ಗಗಳಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಉಚಿತವಾಗಿ ನೀಡಬೇಕು ಅಂತ ಇರುತ್ತದೆ, ಸದರಿ ಯೋಜನೆಯಲ್ಲಿ ಕೊಳವೆ ಭಾವಿ

ಕೊರೆಸುವುದು, ಪಂಪು ಮತ್ತು ಮೋಟಾರ್ ಅಳವಡಿಸುವುದು ಹಾಗೂ ವಿದ್ಯುತ್ ಸಂಪರ್ಕವನ್ನು ಕೊಡಿಸುವುದು. ಇದರಿಂದ ರೈತರಿಗೆ ಅನುಕೂಲವಾಗುವಂತೆ ಮಾಡುತ್ತಿದ್ದೆ.

3. ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ರಾಜ್ಯ ಮಟ್ಟದ ಪತ್ರಿಕೆಯಲ್ಲಿ ಜಾಹಿರಾತು ಕೇಂದ್ರ ಕಛೇರಿಯಿಂದ ಅಧಿಸೂಚನೆ ಪ್ರಕಟಿಸಲಾಗುತ್ತದೆ. ಅದೇ ಪ್ರಕಟಣೆಯನ್ನು ಜಿಲ್ಲಾ ಪತ್ರಿಕೆಯಲ್ಲಿ ಪ್ರಕಟಣೆ ಮಾಡುತ್ತೇವೆ. ಅರ್ಜಿದಾರರ ಅರ್ಜಿಗಳನ್ನು ಅಹ್ವಾನ ಮಾಡುತ್ತಿದ್ದೆವು. ಬಂದ ಅರ್ಜಿಗಳನ್ನು ಸರಿಯಾಗಿ ಕೂಲಕುಂಷವಾಗಿ ಪರಿಶೀಲನೆ ಮಾಡಿ ಆಯ್ಕೆ ಸಮಿತಿ ಮುಂದೆ ಮಂಡಿಸಲಾಗುತ್ತದೆ. ಆಯ್ಕೆ ಸಮಿತಿಯಲ್ಲಿ ಶಾಸಕರು, ಜಿಲ್ಲಾ ವ್ಯವಸ್ಥಾಪಕರು ಇರುತ್ತಾರೆ. ದೇವರಾಜ ಅರಸ್ ಹಿಂದುಳಿದ ವರ್ಗಗಳ ನಿಗಮ ಜಿಲ್ಲಾ ವ್ಯವಸ್ಥಾಪಕರು ಇವರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಉಳಿದ ಸದಸ್ಯರಾಗಿ ಬೆಸ್ಕಾಂ ಅಧಿಕಾರಿ, PWD ಇಂಜಿನಿಯರ್, ತೋಟಗಾರಿಕೆ ಅಧಿಕಾರಿಗಳು ಮತ್ತು ಕೃಷಿ ಇಲಾಖಾ ಅಧಿಕಾರಿಗಳು ಇರುತ್ತಾರೆ. ಕಮಿಟಿಯವರು ಅಭ್ಯರ್ಥಿಗಳಲ್ಲಿ ಸೂಕ್ತವಾದವರನ್ನು ಆಯ್ಕೆ ಮಾಡುತ್ತಾರೆ. ಆಯ್ಕೆ ಆದ ನಂತರ ಸದರಿ ಪಟ್ಟಿಯನ್ನು ನಾವು ಬೆಂಗಳೂರಿನ ಕೇಂದ್ರ ಕಛೇರಿಗೆ ಅನುಮೋದನೆಗಾಗಿ ಸಲ್ಲಿಸುತ್ತೇವೆ. ಸಲ್ಲಿಸಿದ ನಂತರ ಕೇಂದ್ರ ಕಛೇರಿಯ ಅಧಿಕಾರಿಗಳು ಪುನರ್ ಪರಿಶೀಲನೆ ಮಾಡಿ ಅನುಮೋದನೆ ಮಾಡಿ ಜಿಲ್ಲಾ ಕಛೇರಿಯವರಿಗೆ ಕಳುಹಿಸುತ್ತಾರೆ.

4. ಅರ್ಜಿದಾರರ ಜಮೀನಿನಲ್ಲಿ ಕೊಳವೆ ಭಾವಿ ಕೊರೆಸುವುದು. ಕೇಂದ್ರ ಕಛೇರಿಯವರು ಏಜೆನ್ಸಿಯನ್ನು ಟೆಂಡರ್ ಮೂಲಕ ಆಯ್ಕೆ ಮಾಡುತ್ತಾರೆ. ಆಯ್ಕೆ ಆಗಿರುವ ಬೋರವೆಲ್ ಏಜೆನ್ಸಿಯವರು ಜಿಲ್ಲಾ ಕಛೇರಿಗೆ ಬಂದು ಅಧಿಕಾರಿಗಳ ಸಮೇತ ಅರ್ಜಿದಾರರ ಜಮೀನುಗಳಿಗೆ ಹೋಗಿ ಅವರ ಸಮಕ್ಷಮ ಬೋರವೆಲ್ ಕೊರೆಯುತ್ತಾರೆ. ಅಲ್ಲಿಂದ ಕೇಂದ್ರ ಕಛೇರಿಯಿಂದ ಬಿಲ್ ಹೋಗಿ ಅಲ್ಲಿ ಸಹಿ ಆದ ನಂತರ ಏಜೆನ್ಸಿಯವರಿಗೆ payment ಆಗುತ್ತದೆ.

5. ಎರಡನೇ ಹಂತ ಅಂದರೆ ಕೊರೆದ ಕೊಳವೆ ಬಾವಿಗೆ ಪಂಪ್ ಸೆಟ್ ನ್ನು ಅಳವಡಿಸುವುದು. ಅದಕ್ಕೂ ಏಜೆನ್ಸಿ ಕೇಂದ್ರ ಕಛೇರಿಯಿಂದ ಅನುಮೋದನೆಯಾಗಿರುವ ಏಜೆನ್ಸಿಯ ಪಲಾನುಭುವಿಗಳಿಗೆ ಪಂಪ್ ಸೆಟ್ ಮತ್ತು ಮೋಟಾರ್ ನ್ನು ಹಾಗೂ ಪೈಪ್ ನ್ನು ಅಳವಡಿಸುತ್ತಾರೆ. ತದನಂತರ ವಿದ್ಯುತ್ ಸರಭರಾಜನ್ನು ಸ್ಥಳೀಯ ಬೆಸ್ಕಾಂ ಕಛೇರಿಯಿಂದ ಪಡೆಯಲು ಅರ್ಜಿದಾರರಿಂದ ಅರ್ಜಿ ಪಡೆದುಕೊಂಡು ನೋಂದಣಿ ಮಾಡಿಸಲಾಗುತ್ತದೆ. ನಂತರ ಬೆಸ್ಕಾಂ ಅಧಿಕಾರಿಯವರು ವಿದ್ಯುತ್ ಸಂಪರ್ಕವನ್ನು ಅಳವಡಿಸುತ್ತಾರೆ. ಇಷ್ಟು ಕೆಲಸವನ್ನು ಪೂರೈಸುವುದು ಉಚಿತವಾಗಿದ್ದು, ಅರ್ಜಿದಾರರಿಂದ ಪಡೆಯುವ ವಂತಿಕೆ ಯಾವುದು ಇರುವುದಿಲ್ಲ. ಅರ್ಜಿ ಅಹ್ವಾನ ಮಾಡುವುದರಿಂದ ವಿದ್ಯುತ್ ಸಂಪರ್ಕ ಮಾಡುವವರೆಗೆ ಯಾವುದೇ ವಂತಿಕೆ ಇರುವುದಿಲ್ಲ.

6. ಈ ಪ್ರಕರಣದಲ್ಲಿ ಹಿಂದಿನ ಜಿಲ್ಲಾ ವ್ಯವಸ್ಥಾಪಕರು ಚಾಸಾ-1ರವರು ಬೋರವೆಲ್ ನ್ನು ಕೊರೆಸಿದ್ದರು, ಪಂಪ್ ಮತ್ತು ಮೋಟಾರ್ ನ್ನು ಅಳವಡಿಸಿದ್ದರು. ವಿದ್ಯುತ್ ಸಂಪರ್ಕ ಮಾಡುವುದು ಬಾಕಿ ಇತ್ತು. ವಿದ್ಯುತ್ ಸಂಪರ್ಕವನ್ನು ಮಾಡುವ ಬಾಬ್ತು ಅರ್ಜಿದಾರರು ಬೆಸ್ಕಾಂಗೆ ಶುಲ್ಕ ಪಾವತಿಸಬೇಕಾಗಿದೆ ಅಂತ ಹೇಳಿ ಆರೋಪಿಯು ದೂರುದಾರರಿಂದ ಹಣ ಪಡೆದಿರುವುದು ನನಗೆ ತಿಳಿದು ಬಂದಿದೆ. ವಿದ್ಯುತ್ ಸಂಪರ್ಕ ಅಳವಡಿಸಲು ದೂರುದಾರರಿಂದ ಹಣ ಪಡೆಯುವುದು ಇರುವುದಿಲ್ಲ. ವಿದ್ಯುತ್ ಸಂಪರ್ಕವನ್ನು ಉಚಿತವಾಗಿ ಅಳವಡಿಸಲಾಗುತ್ತದೆ.

**ಪಾಟೀ ಸವಾಲುಃ ಶ್ರೀ ಆರ್.ಕೆ., ವಕೀಲರಿಂದ ಆರೋಪಿತರ ಪರವಾಗಿ**:

ಆರೋಪಿ ಪರ ವಕೀಲರು ಸ್ವಲ್ಪ ಸಮಯದ ನಂತರ ಪಾಟೀ ಸವಾಲು ಮಾಡುವುದಾಗಿ ಹೇಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ದಿ: 25-02-2026 ರಂದು ಮಧ್ಯಾಹ್ನ 1.00 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಆರ್.ಕೆ., ವಕೀಲರಿಂದ ಆರೋಪಿತರ ಪರವಾಗಿ**:

7. ಡಿ. ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ದಿ ನಿಗಮದ ಬೋರ್ಡ್‌ನ ಸುತ್ತೋಲೆಯ ಪ್ರಕಾರ ಗಂಗಾ ಯೋಜನೆಯಡಿಯಲ್ಲಿ ಆಯ್ಕೆ ಮಾಡಲು ಸಾಕಷ್ಟು ನಿಬಂಧನೆಗಳು ಇವೆ ಅಂದರೆ ನಿಜ. ಮೊದಲನೆಯ ನಿಂಬಂಧದಲ್ಲಿ ಯಾವ ಭೂಮಿಯಲ್ಲಿ ಬೊರವೆಲ್ ನಲ್ಲಿ ಕೊರೆಸಬೇಕು ಅಂತ ಪರಿಶೀಲನೆ ಮಾಡಬೇಕು ಅಂದರೆ ನಿಜ. ಬೊರವೆಲ್ ಕೊರೆಯುವ ಸಂದರ್ಭದಲ್ಲಿ ವಿಡಿಯೋಗ್ರಾಫಿ ಮಾಡಬೇಕು ಅಂದರೆ ನಿಜ. ಎರಡನೇಯದಾಗಿ, ಬೊರವೆಲ್ ಕೊರೆಯುವ ಸಂದರ್ಭದಲ್ಲಿ ಪಲಾನುಭವಿ ಮತ್ತು ನಿಗಮದ ಅಧಿಕಾರಿಗಳ ಸಮಕ್ಷಮದಲ್ಲಿ ಭಾವಚಿತ್ರಗಳನ್ನು ತೆಗೆಯಬೇಕಾಗುತ್ತದೆ ಅಂದರೆ ನಿಜ. ಮೂರನೇಯದಾಗಿ, ಬೊರವೆಲ್ ಏಜೆನ್ಸಿ ಬಿಲ್ ಗಳನ್ನು ನಿಗಮ ವ್ಯವಸ್ಥಾಪಕರಿಗೆ ಸಲ್ಲಿಸಬೇಕು ಅಂದರೆ ನಿಜ. ನಾಲ್ಕನೇಯದಾಗಿ, ಪಲಾನುಭವಿಗಳ ತಮ್ಮ ಅರ್ಜಿಗಳನ್ನು ನಮೂನೆ-6 ರಂತೆ ಸಲ್ಲಿಸಿದ ನಂತರ ನಮೂನೆ-7 ಯಶಸ್ವಿಯಾದ ಬಗ್ಗೆ ಇರುತ್ತದೆ ಅಂದರೆ ನಿಜ. ಐದನೇಯದಾಗಿ, ಪಲಾನುಭವಿಯ ಬೊರವೆಲ್ ಕೊರೆಸಿದ ಬಗ್ಗೆ ಗ್ರಾಮ ಲೆಕ್ಕಾಧಿಕಾರಿಗಳಿಂದ ಪ್ರಮಾಣ ಪತ್ರವನ್ನು ಪಡೆಯಬೇಕಾಗಿರುತ್ತದೆ ಅಂದರೆ ನಿಜ. ಆರನೇಯದಾಗಿ, ಕೊಳಬೆ ಬಾವಿ ನೀರಿನ ಇರುವಿಕೆಯನ್ನು 90 ಡಿಗ್ರಿ ವಿ ಲಾಂಚ್ ವಿಧಾನದ

ಪ್ರಕಾರ ಜಿಲ್ಲಾ ವ್ಯವಸ್ಥಾಪಕರು ಮತ್ತು ಪಲಾನುಭವಿಗಳ ಸಮಕ್ಷಮ ಗುತ್ತಿಗೆದಾರರು ಕೈಗೊಂಡ ನಿಗಧಿತ ನಮೂನೆಯಲ್ಲಿ ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ ಅಂದರೆ ನಿಜ. 3rd Party ಯಿಂದ Inspection ಮಾಡಿಸಬೇಕು ಅಂದರೆ ನಿಜ.

8. ಪಲಾನುಭವಿಯು ದಾಖಲೆಗಳನ್ನು ನೀಡದೇ ಇದ್ದರೆ ವಿದ್ಯುತ್ ಸಂಪರ್ಕವನ್ನು ಪೂರೈಸಲು ಆಗುವುದಿಲ್ಲ ಅಂದರೆ ನಿಜ. ದೂರುದಾರರು ಮೇಲೆ ಸೂಚಿಸಿದಂತೆ ನಿಯಮಗಳಂತೆ ದಾಖಲೆಗಳನ್ನು ಸಲ್ಲಿಸಿದ ಬಗ್ಗೆ ಎಲ್ಲಿಯೂ ನಮೂದಾಗಿಲ್ಲ ಅಂದರೆ ಸರಿಯಲ್ಲ. ಆ ದಾಖಲೆಗಳನ್ನು ಆಗಲೇ ಆ ದಾಖಲೆಗಳನ್ನು ಪಡೆದುಕೊಂಡಿದ್ದಾರೆ. ತನಿಖಾಧಿಕಾರಿಗಳು ಯಾವ ಯಾವ ದಾಖಲೆಗಳನ್ನು ಪಡೆದುಕೊಂಡಿದ್ದಾರೆ ಎನ್ನುವ ಬಗ್ಗೆ ಖುದ್ದು ಮಾಹಿತಿ ಇಲ್ಲ ಅಂದರೆ ನಿಜ. ಆದ್ದರಿಂದ ದೂರುದಾರರ ನಿಯಮಗಳಂತೆ ದಾಖಲೆಗಳು ಹಾಜರುಪಡಿಸಿದ್ದರೋ ಇಲ್ಲವೋ ಎಂಬುದರ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಅಂದರೆ ನಿಜ.

9. ಪಂಪ್ ಸೆಟನ್ನು ಮತ್ತು ಮೋಟಾರ್ ನ್ನು ಅಳವಡಿಸಿದ ಬಗ್ಗೆ ನಾನು ಖುದ್ದಾಗಿ ನೋಡಿಲ್ಲ ಅಂದರೆ ಸರಿಯಲ್ಲ. ಅಲ್ಲಿ ಖುದ್ದಾಗಿ ನೋಡಿದ ಬಗ್ಗೆ ದಾಖಲೆಗಳು ಇಲ್ಲ ಅಂದರೆ ಕಡತದಲ್ಲಿ ಲಭ್ಯ ಇದೆ. ಪಂಪ್ ಮತ್ತು ಮೋಟಾರ್ ನ್ನು ಅಳವಡಿಸಿದ ಬಗ್ಗೆ ನಮ್ಮ ರೆಕಾರ್ಡನಲ್ಲಿ ನಾನು ನೋಡಿಲ್ಲ. ಅರ್ಜಿದಾರರು ಸೌಲಭ್ಯಗಳನ್ನು ಪಡೆಯಲು ಸಲ್ಲಿಸಿದ ಅರ್ಜಿಯನ್ನು ಹೊರತುಪಡಿಸಿ ಬೇರೆ ಅರ್ಜಿಗಳನ್ನು ಸಲ್ಲಿಸಿರುವುದಿಲ್ಲ ಅಂದರೆ ನಿಜ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ದೂರುದಾರರೊಂದಿಗೆ ಮಾತನಾಡುವ ಪ್ರಮಯೇ ಬಂದಿಲ್ಲ ಅಂದರೆ ನಿಜ. ತನಿಖಾಧಿಕಾರಿಗಳು ತನಿಖೆ ನಡೆಸಿದ ಬಗ್ಗೆ ಸಾಕ್ಷಿ ಕೊಡಬೇಕು ಅಂತ ಆ ಭ್ರಮೆಯಲ್ಲಿ ಇದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ (ಶ್ರೀ ಟಿ.ಆರ್.ಎಸ್.)**:

ಪ್ರಶ್ನೇಃ ದೂರುದಾರರು ಆಯ್ಕೆ ಆಗುವ ಪೂರ್ವದಲ್ಲಿ ಎಲ್ಲಾ ದಾಖಲೆಗಳನ್ನು ಸಲ್ಲಿಸಿದ್ದರು ಕೇವಲ ವಿದ್ಯುತ್ ಸಂಪರ್ಕ ಕೊಡುವ ಬಾಕಿ ಕೆಲಸ ಇತ್ತು ಅಂದರೆ?

ಉತ್ತರಃ ನಿಜ.

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಕೆ., ವಕೀಲರಿಂದ ಆರೋಪಿತರ ಪರವಾಗಿ**:

10. ಪಲಾನುಭವಿ ಅಂದರೆ ದೂರುದಾರರು. ದೂರುದಾರರು ಅಥವಾ ಪಲಾನುಭವಿಯವರು ಯಾವ ದಾಖಲೆಗಳನ್ನು ಕೊಟ್ಟಿದ್ದರು ಯಾವ ದಾಖಲೆಗಳನ್ನು ಕೊಟ್ಟಿಲ್ಲ ಎನ್ನುವ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಅಂದರೆ ನಿಜ. ಪಲಾನುಭವಿ ಅಥವಾ ದೂರುದಾರರು ಯಾವುದೇ ದಾಖಲೆಗಳನ್ನು ಕೊಟ್ಟಿರುವುದಿಲ್ಲ ಅಂದರೆ ದಾಖಲೆಗಳನ್ನು ಕೊಡದೇ ಇದ್ದರೆ ಯಾವುದೇ ಸೌಲಭ್ಯ ಬರುವುದಿಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.